ಅ) ಸರ್ಕಾರದ ಅಧಿಸೂಚನೆ ಸಂ. ಡಿಪಿಎಆರ್ 2 ಎಸ್ಆರ್‌ಡಿ 98 ದಿನಾಂಕ:30-10-1999ರ ಪ್ರಕಾರ ಸರ್ಕಾರ 115 ಸಹಾಯಕ ದಂತ ಶಸ್ತ್ರ ಚಿಕಿತ್ಸಕರ ಹುದ್ದೆಗಳು ನೇರ ನೇಮಕಾತಿ ಮುಖಾಂತರ ತುಂಬಲು ಆದೇಶಿಸಿರುತ್ತಾರೆ. ಈ ಪ್ರಕ್ರಿಯೆಯು ಪ್ರಗತಿಯಲ್ಲಿದೆ. ಹಾಗೂ ಹಾಲಿ ಖಾಲಿ ಇರುವ ಹುದ್ದೆಗಳು ಈ ನೇರ ನೇಮಕಾತಿಯ ಮುಖಾಂತರ ತುಂಬಲಾಗುವುದು.

ಬೆಂಗಳೂರಿನ ವಿ.ಹೆಚ್.ಡಿ. ಹೋಮ್‌ಸೈನ್ಸ್ ಕಾಲೇಜಿಗೆ ಪೀಠೋಪಕರಣ

1959 (2219) ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಬೆಂಗಳೂರಿನ ವಿ.ಹೆಚ್.ಡಿ. ಹೋಮ್‌ಸೈನ್ಸ್ ಕಾಲೇಜಿನಲ್ಲಿ ಪೀಠೋಪಕರಣಗಳಿಲ್ಲದೆ ವಿದ್ಯಾರ್ಥಿನಿ ಅನಾನುಕೂಲವುಂಟಾಗಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಡಾ: ಜಿ.ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು) :

ಅ) ಬಂದಿದೆ.

ಆ) 1999-2000ನೇ ಸಾಲಿನ ಆಯವ್ಯಯದಲ್ಲಿ ಸದರಿ ಕಾಲೇಜಿಗೆ ಗ್ರಂಥಾಲಯ ಪುಸ್ತಕ ಖರೀದಿ, ಪೀಠೋಪಕರಣ ಹಾಗೂ ಪ್ರಯೋಗಾಲಯದ ಉಪಕರಣಗಳನ್ನು ಖರೀದಿಸಲು ರೂ.40,000-00 ಗಳನ್ನು (ರೂ.ನಲವತ್ತು ಸಾವಿರ) ಬಿಡುಗಡೆ ಮಾಡಲಾಗಿದೆ. ಸದರಿ ಮೊತ್ತವನ್ನು ಕಾಲೇಜಿನವರು ಬಳಸಿಕೊಂಡಿರುತ್ತಾರೆ.

ಬೈಲಹೊಂಗಲ ತಾಲ್ಲೂಕು ಬೆಳವಡಿಯಲ್ಲಿ ಕಾಲೇಜು ಪ್ರಾರಂಭ

1961 (2576) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) 50 ವರ್ಷದ ಸ್ವಾತಂತ್ರ್ಯ ಸಂಗ್ರಾಮದ ಸವಿ ನೆನಪಿಗಾಗಿ ವೀರರಾಣಿ ಬೆಳವಡಿ ಮಲ್ಲಮ್ಮನ ಹೆಸರಿನಿಂದ ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕು ಬೆಳವಡಿಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಆರ್ಟ್ಸ್ ಕಾಲೇಜನ್ನು ಪ್ರಾರಂಭಿಸಲು ಹಿಂದಿನ ಸರ್ಕಾರದ ಉನ್ನತ ಶಿಕ್ಷಣ ಸಚಿವರು ಹಾಗೂ ಮುಖ್ಯ ಮಂತ್ರಿಗಳು ಪ್ರಸ್ತಾವನೆಯ ಮೇಲೆ ಒಪ್ಪಿಗೆ ನೀಡಿದ ಸಂಗತಿ ನಿಜವೆ;

ಆ) ಹಿಂದಿನ ಉನ್ನತ ಶಿಕ್ಷಣ ಸಚಿವರು ಹಾಗೂ ಮುಖ್ಯ ಮಂತ್ರಿಗಳು 50 ವರ್ಷದ ಸ್ವಾತಂತ್ರ್ಯ ಸಂಗ್ರಾಮ ವರ್ಷ ಆಚರಿಸುತ್ತಿರುವ ಹಿನ್ನೆಲೆಯಲ್ಲಿ ಶೂರ ಮಹಿಳೆ ಬೆಳವಡಿ ಮಲ್ಲಮ್ಮನ ಹೆಸರಿನಿಂದ ಪ್ರಥಮ ದರ್ಜೆ ಸರ್ಕಾರಿ ಆರ್ಟ್ಸ್ ಕಾಲೇಜನ್ನು ಬೆಳವಡಿಯಲ್ಲಿ ಪ್ರಾರಂಭಿಸಲು ಒಪ್ಪಿಗೆ ನೀಡಿದ್ದರಿಂದ ಇದೇ ವರ್ಷದಿಂದ ಕಾಲೇಜು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ